







ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಅದರಲ್ಲೂ ರಮೇಶ್ ಕುಮಾರ್ ಆರೋಗ್ಯ ಇಲಾಖೆ ಚುಕ್ಕಾಣಿ ಹಿಡಿದ ಬಳಿಕ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಾತ್ಮಕ ಬದಲಾವಣೆ ಆಗಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಒಂದು ಸುತ್ತು ಹಾಕಿ ಬಂದರೆ ಇದು ನಮ್ಮೆಲ್ಲರ ಅರಿವಿಗೆ ಬರುತ್ತದೆ.

ಆಸ್ಪತ್ರೆಗಳು ಹೆಚ್ಚು ಜನಸ್ನೇಹಿ ಎನಿಸಿವೆ. ಅಲ್ಲಿ ಸ್ವಚ್ಛ ವಾತಾವರಣ ಕಾಣಬಹುದು. ಎಲ್ಲ ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳಲ್ಲಿ ಒಳ ರೋಗಿಗಳು ಮತ್ತು ಅವರ ಸಹಾಯಕರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡಲಾಗುತ್ತದೆ. ರಿಯಾಯ್ತಿ ದರದಲ್ಲಿ ಆಹಾರ ಒದಗಿಸುವ ಇಂದಿರಾ ಕ್ಯಾಂಟೀನ್, ಕೆಎಂಎಫ್‌ನಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಒದಗಿಸುವ ಮಳಿಗೆ, ಉತ್ತಮ ಗುಣಮಟ್ಟದ ಹಣ್ಣುಗಳನ್ನು ಪೂರೈಸುವ ಹಣ್ಣಿನ ಅಂಗಡಿಗಳು. ಒಳರೋಗಿಗಳಿಗೆ ಸ್ನಾನಕ್ಕಾಗಿ ಸೌರ ಚಾಲಿತ ಬಿಸಿ ನೀರಿನ ಸೌಲಭ್ಯವೂ ಇರಲಿದೆ. ಯಾವುದೇ ಖಾಸಗಿ ಆಸ್ಪತ್ರೆಯ ವ್ಯವಸ್ಥೆಗಳಿಗೂ ಕಡಿಮೆ ಇಲ್ಲದಂತೆ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸುವುದು ಸರ್ಕಾರದ ಉದ್ದೇಶ.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಅವ್ಯವಹಾರ ನಡೆಯುತ್ತದೆ, ಸಿಬ್ಬಂದಿ ಸರಿಯಾಗಿ ಕೆಲಸ ಮಾಡುವುದಿಲ್ಲ, ಎಲ್ಲದಕ್ಕೂ ಹಣ ಕೇಳುತ್ತಾರೆ’ ಎಂಬ ಆರೋಪಗಳು ಸಾಮಾನ್ಯ. ಇದು ಸಾರ್ವತ್ರಿಕ ಸಮಸ್ಯೆ ಅಲ್ಲ ಎಂಬುದು ನಿಜ. ಕೆಲವು ಕಡೆಗಳಲ್ಲಿ ಇಂತಹ ಸಮಸ್ಯೆಗಳು ಇರಬಹುದು. ಅದನ್ನು ಸರಿಪಡಿಸಲು ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳ ಆವರಣದಲ್ಲಿ ನಡೆಯಬಹುದಾದ ಅವ್ಯವಹಾರಗಳ ಮೇಲೆ ಕಣ್ಣಿಡಲು ಮತ್ತು ಭದ್ರತೆ ವ್ಯವಸ್ಥೆಗಾಗಿ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದು ಸಾರ್ವಜನಿಕರು ಸಮಾಧಾನಪಡಬಹುದಾದ ಸಂಗತಿ.

ಆಸ್ಪತ್ರೆಗಳಿಗೆ ಬರುವ ರೋಗಿಗಳು ಮತ್ತು ಅವರ ಬಂಧುಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು ಜಿಲ್ಲಾ, ತಾಲ್ಲೂಕು ಮತ್ತು ಸಮುದಾಯ ಆಸ್ಪತ್ರೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸುವ ವ್ಯವಸ್ಥೆ ಜಾರಿಯಲ್ಲಿದೆ. ಒಟ್ಟು 188 ಆರ್.ಓ + ಯುವಿ ಕುಡಿಯುವ ನೀರಿನ ಘಟಕ ಸ್ಥಾಪನೆ ಆಗಲಿದೆ. ಈಗಾಗಲೇ 65 ಶುದ್ಧ ಕುಡಿಯುವ ನೀರಿನ ಘಟಕಗಳು

## ದಂತ ಭಾಗ್ಯ ಯೋಜನೆ

ಇಲ್ಲಿಯವರೆಗೆ ಬಂದ ಸರ್ಕಾರಗಳು ಹಿರಿಯ ನಾಗರೀಕರ ದಂತ ಆರೋಗ್ಯದ ಬಗ್ಗೆ ಗಮನ ಹರಿಸಿದ್ದೇ ಇಲ್ಲ. ಮೊದಲ ಬಾರಿಗೆ ದಂತ ಆರೋಗ್ಯ ನೀತಿಯನ್ನು ಜಾರಿ ತಂದಿದ್ದು ಮಾತ್ರವಲ್ಲದೆ, 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಉಚಿತವಾಗಿ ಕೃತಕ ಹಲ್ಲಿನ ಸೆಟ್‌ಗಳನ್ನು ನೀಡುವ ಕಾರ್ಯಕ್ರಮ ಜಾರಿಗೆ ತರಲಾಯಿತು. ಅಲ್ಲದೆ, ದಂತ ರೋಗಗಳ ತಪಾಸಣೆ ಮತ್ತು ನಿಯಂತ್ರಣಕ್ಕಾಗಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದೇ ರೀತಿ ‘ನಗು–ಮಗು’ ಯೋಜನೆಯೂ ವಿಶಿಷ್ಟವಾದುದು. ಪ್ರಸವದ ನಂತರದಲ್ಲಿ ಬಾಣಂತಿ ಮತ್ತು ನವಜಾತ ಶಿಶುವಿಗೆ ಸರ್ಕಾರಿ ಆಸ್ಪತ್ರೆಯಿಂದ ಮನೆಗೆ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಬಡವರಿಗೆ ಈ ಕಾರ್ಯಕ್ರಮ ಅತ್ಯಂತ ಪ್ರಯೋಜನಕಾರಿ. ಹಳ್ಳಿಗಾಡುಗಳಲ್ಲಂತೂ ಬಾಣಂತಿ ಮತ್ತು ಶಿಶುವನ್ನು ಮನೆಗೆ ಒಯ್ಯಲು ವ್ಯವಸ್ಥೆಯೇ ಇರುವುದಿಲ್ಲ. ಈ ಯೋಜನೆಯಡಿ ಇಲ್ಲಿಯವರೆಗೆ ಸಾವಿರಾರು ಜನ ಪ್ರಯೋಜನ ಪಡೆದಿದ್ದಾರೆ.

**‘‘ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ’’**